Regd No B G. 155

Sri

16—9—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ವಿ. ಸುಬ್ಬರಾಯುರು [2 ನಯೈ

ಪ್ರಮುಖ ವೆರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೩೦ ನಯೈ

Protect the Cow
ಗೋಸಂರಕ್ಷಣೆ ಮಾಡಿ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷ ನಿತ್ಯಕ್ರಿಗೆಪಾತ್ರಿಯಾದ ಯಾವ್ವಸದಲ್ಲಿಯೇ ಮುಪ್ಪಾದಂತೆ ಭಾವಿಸುವವರು ಮತ್ತು ಸಂಸಾರದಲ್ಲಿ ಜಿಗುಪ್ಸೆ ಹೊಂದಿದವರು ಇಂದೇ ಡಾ || ಮೋತಿಯವರ ಸಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೈಥುನ, ಸ್ವಪ್ನಾವಸ್ಥೆ, ಸ್ತ್ರೀಯರ ಋತುಸಾಮ್ರವದ ತೊಂದರೆ ಮತ್ತು ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಗುಣಪಡಿಸುವರು.

ಜನತಾ ಡಿಸ್ಪೆನ್ಸರಿ

ಸಲಹೆ ಕಾಲ } ಬೆಳಿಗ್ಗೆ 10 ರಿಂದ 1
ಪ್ರತಿ ದಿನವೂ } ಸಂಜೆ 4 ರಿಂದ 8

ಹೆಡ್ ಆಫೀಸ್ :
ಸುಬೇದಾರ್ ಚತ್ರಂ ರೋಡ್
ಬೆಂಗಳೂರು 9. ಫೋಕ ನಂಬ್ರ 75332

ಚಲಚಿತ್ರೋತ್ಸವ

ನವದೆಹಲಿ— ಕಲ್ಕತ್ತಾದಲ್ಲಿ 1965 ರ ಜನವರಿ ತಿಂಗಳಲ್ಲಿ ಭಾರತೀಯ ಚಲನಚಿತ್ರ ಸಪ್ತಾಹವನ್ನು ನಡೆಸಲಾಗುವುದು; ಮುಂದಿನ ಜನವರಿಯಲ್ಲಿ ನವದೆಹಲಿಯಲ್ಲಿ ನಡೆಯುವ ಮೂರನೆಯ ಅಂತರಾಷ್ಟ್ರೀಯ ಚಲಚ್ಚಿತ್ರೋತ್ಸವದ ನಂತರ ಈ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಲಾಗುವುದು.

★

ನಾಳೆಯ ಪರಿಚಾಗಿಗೆ

ದೈವಜ್ಞಶಿರೋಮಣಿ
ಆಸ್ಥಾನ ಮಹಾವಿದ್ವಾನ್, ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ
17 ಸುಧಾವಾರ ಏಕಾದಶಿ ಉತ್ತರಾಷಾಢ

ಭುವನೇಶ್ವರಕ್ಕೆ ಆಗಮನ

ಕೇಂದ್ರ ಇನ್ವೆಸ್ಟಿಗೇಟಿಂಗು ಬ್ಯೂರೊ ವಿನ ಇಬ್ಬರು ಹಿರಿಯ ಅಧಿಕಾರಿಗಳು ಭುವನೇಶ್ವರ ತಲುಪಿದರು. ಶ್ರೀಗಳ ದಾಸ ಮಾಲ್ ಹಾಗೂ ಪಿ ಎ ಸಿಂಗರೋನಿ ಕೆಲವು ಕಾಲ ಇಲ್ಲಿರುವರು. ಒರಿಸ್ಸಾದ ಮಂತ್ರಿಗಳು, ಮಾಜಿ ಮಂತ್ರಿಗಳು ಇವರ ಸಂಬಂಧ ಉಪಾದನೆ ತನಿಖೆಯು ಪೂರ್ವಭಾವಿಯಾಗಿ ಅವರು ಬಂದಿರುವರು.

ಈರ್ವರ ಮರಣ

ತಿರುವಣ್ಣಾಮಲೈನಲ್ಲಿ ಪ್ರವಾಸಿ ಬಸ್ಸೊಂದು ಅವಘಡಕ್ಕೆ ಈಡಾಗಿ ಈರ್ವರು ಸಕ್ತು ಈರ್ವರು ಗಾಯಗೊಂಡರೆಂದು ಸೇಲಂ ವಾರ್ತೆ

ಪೊಲಿಯೊ ರೋಗ

ಭದಾಚಲಂನಲ್ಲಿ ಪೋಲಿಯೊ ಕಾಯಿಲೆ ವಿಪರೀತ ಹಂಡಿದೆ

ನೀರು ಏರಿಕೆ

ಪೆನ್ನಾರು ನದಿ ನೀರು ಏರಿದೆಯೆಂಬುದಾಗಿ ಕಡಪ ವಾರ್ತೆ

ಪ್ರತಿಭಟನೆ

ಪಾಕಿಸ್ತಾನ ತಿಕ್ವಲು ವೃತ್ತದಲ್ಲಿ ಗೋಲೀಬಾರು ಮಾಡಿದ ಬಗ್ಗೆ ವಿಶ್ವ ಸಂಸ್ಥೆ ನಿರೀಕ್ಷಕರಿಗೆ ಭಾರತ ಪ್ರತಿಭಟನೆ ಸಲ್ಲಿಸಿದೆ

ಪ್ರಶಂಸೆ

ಭಾರತ-ರಷ್ಯ ಸಹಕಾರದ ಬಗ್ಗೆ ಭಾರತ ಅಧ್ಯಕ್ಷ ಡಾ|| ರಾಧಾಕೃಷ್ಣನ್ ಲೆನಿನ್‌ಗ್ರಾಡಿನಲ್ಲಿ ಪ್ರಶಂಸಿಸಿರುವರು

ಅಕ್ಕಿ ಬೆಲೆ ನಿಗದಿ

ಅಕ್ಕಿಗೆ ಕಾಸ್ಟ್ರೀಯ ಉತ್ಪಾದನೆ ಬೆಲೆಯನ್ನು ಬೇಗ ನಿಗದಿಮಾಡುವುದಾಗಿ ಆಹಾರ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ನವದೆಹಲಿಯಲ್ಲಿ ತಿಳಿಸಿದರು

ಸತ್ತವನು ಬಂದ!

ಬಿಟುಲ್ (ಮಧ್ಯ ಪ್ರದೇಶ)— ಈ ಸುದ್ದಿಯ ಸ್ವಾರಸ್ಯ ನೋಡಿ! ಒಬ್ಬ ಯುವಕನು ಕೆಲವು ವಾರಗಳ ಹಿಂದೆ ಎಕ್ಕಗಳನ್ನು ಕೊಂಡು ತರಲು ಹಣ ತೆಗೆದುಕೊಂಡು ಮನೆಯಿಂದ ಹೊರಟ: ವಧ್ಯೆ ಹಣವನ್ನು ಕಳೆದುಕೊಂಡು ಮನೆ ಬರದರೆ ಹೊಡೆದು ಬೈದು ಮಾಡಾರೆಂದು ಮನೆಗೆ ಬಂದೇ ಇದ್ದ : ಈ ವಧ್ಯೆ ಗ್ರಾಮದ ಹೊರಗೆ ಒಂದು ಹೆಣ ಬಿದ್ದಿದ್ದನ್ನು ಕಂಡು, ಅವನ ಹೆಣವೆಂದು ಗುರುತಿಸಿ, ಶವಸಂಸ್ಕಾರವನ್ನು ಅವನ ತಂದೆ ನಡೆಸಿದನು ; ಹೀಗಾದ ಮೇಲೆ ಕೆಲವು ದಿನಗಳ ಹಿಂದೆ ಆ ಯುವಕನು ವಾಪಸ್ಸು ಬರಲು ಮನೆಯವರು ಅವನು ಸತ್ತವನ ದೆವ್ವವೆಂದು ಹೇಳಿ ಮನೆಗೆ ಸೇರಿಸಲು ತಿರಸ್ಕರಿಸಿದರು ; ಆದರೆ ಅನಂತರ ಗ್ರಾಮದ ಹಿರಿಯರು ಬಂದ್ದಿದ್ದ ಹೆಣ ಬೇರೆಯವನದೆಂದು ತಿಳಿಯಬಂದಮೇಲೆ ಅವನನ್ನು ಮನೆಗೆ ಸೇರಿಸಿಕೊಳ್ಳಲಾಯಿತು!

★

ಕೇಳಿಕೆ ಬಂದಿಲ್ಲ

ಒರಿಸ್ಸಾ ಮುಖ್ಯ ಮಂತ್ರಿ ಪದವಿ ವಹಿಸಿಕೊಳ್ಳುವಂತೆ ತಮಗೆ ಶ್ರೀ ಲಾಲ ಬಹಾದ್ದೂರು ಕಾಸ್ಟ್ರಿಯವರಿಂದ ಕೇಳಿಕೆ ಬಂದಿಲ್ಲವೆಂದು ಉತ್ತರ ಪ್ರದೇಶ ಗವರ್ನರರಾದ ಶ್ರೀ ಬಿಶ್ವನಾಥದಾಸರು ಲಕ್ನೋವಿನಲ್ಲಿ ತಿಳಿಸಿದರು. ಕೇಳಿಕೆ ಬಂದರೆ ಪರಿಶೀಲಿಸುವುದಾಗಿ ಅವರು ತಿಳಿಸಿದರು.

ರಷ್ಯಕ್ಕೆ ಅಯೂಬರು

ಪಾಕಿಸ್ತಾನದ ಅಧ್ಯಕ್ಷ ಅಯೂಬರು ರಷ್ಯಕ್ಕೆ ಭೇಟಿಕೊಡುವರು. ಇಂಥಹ ದಿನವೆಂಬುದು ನಿಗದಿ ಆಗಿಲ್ಲ.

ಅಪಾರ ಸಾವು

ಸಿಯೋಲು ಹಾಗೂ ಕೇಂದ್ರ ಕೊರಿಯಾದಲ್ಲಿ 382 ಮಂದಿ ಬರುಗಾಳಿ ದೆಸೆಯಿಂದ ಮರಣಹೊಂದಿದರು.

ಆಸಕ್ತಿ ಬೇಡ

ಟೋಕಾ ಮತ್ತು ಪಾಕಿಸ್ತಾನದ ಸಂಗಡ ಸಂಧಾನ ಮಾತುಕತೆ ಆರಂಭಿಸಲು ಭಾರತ ಆಸಕ್ತಿ ವಹಿಸಕೂಡದೆಂದು ಶ್ರೀ ವಿ ಕೆ ಕೃಷ್ಣಮೆನನರು ಬೊಂಬಾಯಿನಲ್ಲಿ ತಿಳಿಸಿದರು.

ಟ್ಯಾಂಕುಗಳ ತಯಾರಿಕೆ

ಮಧ್ಯಮ ಹಾಗೂ ಹಗುರವಾದ ಟ್ಯಾಂಕುಗಳ ತಯಾರಿಕೆ ದೇಶದಲ್ಲಿ ನಡೆಯುವುದಾಗಿ ನವದೆಹಲಿ ವಾರ್ತೆ

ಬಂಧನ

ಗಜೇಂದ್ರಘಡದಲ್ಲಿ ಆದ ಆಹಾರ ಅಂಗಡಿಗಳ ಲೂಟಿ ಸಂಬಂಧದಲ್ಲಿ 56 ಜನ ಬಂಧಿತರಾದರೆಂದು ಬೆಂಗಳೂರು ವಾರ್ತೆ.

ನೌಕರರ ಸಂಖ್ಯೆ

ನಿಮ್ನ ವರ್ಗ ಹಾಗೂ ಗಿರಿಜನರು 346304 ಮಂದಿ ಭಾರತ ಸರ್ಕಾರದ ಹುದ್ದೆಯಲ್ಲಿರುವರು.

ಅವನೇ ಸತ್ತ !

ಪರ್ಷದಿಂದ ಬಂದಿರುವ ವಾರ್ತೆ ಫ್ಲೈಯಿಂಗು ಸೂಟು ಧರಿಸಿ ಕಾಂಗರೂ ಬೇಟೆ ಆಡಲು ಓರ್ವನು ಹೋದನು. ಅವನನ್ನೇ ಕಾಂಗರು ಎಂದುಕೊಂಡು ಹಾರೋ ಗುಂಡು ಹಾರಿಸಿ ಕೊಂದರು

★

ಬಹಳ ನಷ್ಟದ ಕಾರಣ ಲಂಡನ್ನಿನ ಡೇಲಿ ಹೆರಾಲ್ಡ್ ತನ್ನ ಪ್ರಕಟಣೆ ನಿಲ್ಲಿಸಿದೆ

★

ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿಗಳು ಕಾಲೇಜಿಗೆ ಹಾಜರಾಗಿದರು

★

ಪರ್ಷದೊಳಗೆ ಭಾರತ ಅಣುಬಾಂಬು [illegible]

ವರ್ಣಾಶ್ರಮಧರ್ಮ

(ಮುಂದುವರಿದುದು)

ಜಾತೀಯತೆಯು ಹಿಂದುಗಳಿಗೆ ಒಂದು ಪ್ರಬಲವಾದ ಶಕ್ತಿ ಮತ್ತು ಐಕ್ಯತೆಯನ್ನುಂಟುಮಾಡಿದೆ : ಅದರಿಂದಲೇ ಈ ಧರ್ಮಕ್ಕೆ ಎಂಥಾ ಪ್ರಬಲವಾದ ಶತ್ರುವಿನ ಆಘಾತವುಂಟಾದರೂ ಕೂಡ ಅವರು ತನ್ನ ಧರ್ಮವನ್ನು ಕಾಪಾಡಿಕೊಂಡಿರುತ್ತಾರೆ ಪರ್ಶಿಯನರು ಜಾತಿಗಳಿಲ್ಲದೇ ಮುಸಲ್ಮಾನರ ಆಘಾತಕ್ಕೆ ಜಾಗ್ರತೆಯಿಂದ ಆ ದೇಶದಲ್ಲಿ ತಮ್ಮ ಜಾತಿಯೇ ಇಲ್ಲದಂತೆ ಮಾಡಿದರು ಆದರೆ ಭಯಂಕರವಾದ ಪಿಶಾಚಿನೃತ್ಯ, ಭಯೋತ್ಪಾದನೆ, ಆಶೆ, ಮುಂತಾದ ಅನೇಕ ರೀತಿಯಿಂದ ಸ್ವಯತ್ನ ಪಟ್ಟರೂ ಕೂಡ ಮುಸಲ್ಮಾನರು ಕೇವಲ ಕೆಲವಾರು ಲಕ್ಷ ಜನರನ್ನು ಮಾತ್ರವೇ ತಮ್ಮ ಜಾತಿಗೆ ಸೇರಿಸಿಕೊಳ್ಳಲು ಈ ಭಾರತದಲ್ಲಿ ಸಾಧ್ಯವಾಯಿತು ; ಇದಕ್ಕೆ ಹಿಂದುಗಳ ಜಾತಿಯು ಬಲವೇ ಕಾರಣವಾಗಿರುತ್ತೆ.

ಹಿಂದೂ ಸಮಾಜವು ಸನಾತನಧರ್ಮದಲ್ಲಿ ಆಶ್ರಮಧರ್ಮವು ಮತ್ತೊಂದು ಪ್ರಾಮುಖ್ಯ ಸ್ಥಾನವನ್ನು ಹೊಂದಿರುತ್ತದೆ : ಈ ಪವಿತ್ರವಾದ ಭಾರತವು ಕರ್ಮಭೂಮಿ ಎನ್ನಲ್ಪಡುತ್ತದೆ : ಇಲ್ಲಿ ಪ್ರತಿಯೊಬ್ಬ ಮಾನವನೂ ಸಂಸಾರ ಚಕ್ರದಿಂದ ಮುಕ್ತಿಹೊಂದಲು ಜೀವಿಸಿರುತ್ತಾನೆ : ಪ್ರತಿಯೊಬ್ಬನೂ ತನ್ನ ಜನನ ಕಾಲದಿಂದ ಮರಣಪರ್ಯಂತರ ಯಾವುದಾದರೂ ಕರ್ಮವನ್ನು ಮಾಡುತ್ತಲೇ ಇರಬೇಕು.

ನಮ್ಮ ಶಾಸ್ತ್ರಗಳು ಮನುಷ್ಯನ ಜೀವನವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಭಾಗಕ್ಕೂ ಒಂದೊಂದು ಕ್ಲುಪ್ತವಾದ ಕರ್ಮವನ್ನು ವಿಧಿಸಿದೆ : ಒಬ್ಬ ಮನುಷ್ಯನು ತನ್ನ ಇಪ್ಪತ್ತು-ಇಪ್ಪತ್ತೈದು ವರ್ಷಗಳವರೆಗೆ ಅಧ್ಯಯನ ಮಾಡಿ ಜ್ಞಾನಾರ್ಜನೆ ಮಾಡಿಕೊಳ್ಳಬೇಕು ; ನಂತರ ಮದುವೆ ಮಾಡಿಕೊಂಡು ಐವತ್ತು ವರ್ಷಗಳವರೆಗೆ ಗೃಹಸ್ಥಾಶ್ರಮ ಧರ್ಮವನ್ನು ಪಾಲಿಸಬೇಕು ; ಆನಂತರ ಅವನು ಇಹಲೋಕದ ಚಿಂತೆಯನ್ನು ಬಿಡಬೇಕು, ಮತ್ತು ಮುಕ್ತಿ ಸಾಧನವಾದ ಚಿಂತೆಯನ್ನು ಮಾಡುತ್ತಿರಬೇಕು : ಈ ಸಮಯದಲ್ಲಿ ತನ್ನ ಮಗ ಮತ್ತು ಹೆಂಡತಿಗೆ ಒಳ್ಳೆಯ ಮಾರ್ಗದರ್ಶನ ಮಾಡುವುದೂ ಅವನ ಕರ್ತವ್ಯವಾಗಿರುತ್ತೆ : ಅನಂತರ ದ್ವಿಜರು ಅಲ್ಲಿಂದ ಮುಂದೆ ತಮ್ಮ ಸಂಸಾರದ ಎಲ್ಲಾ ಬಾಂಧವ್ಯವನ್ನೂ ಕತ್ತರಿಸಿ ಸನ್ಯಾಸಧರ್ಮವನ್ನು ಸ್ವೀಕರಿಸಬೇಕು ; ಅಂದರೆ ಇಹಲೋಕ ಚಿಂತೆಯನ್ನು ಸಂಪೂರ್ಣವಾಗಿ ಬಿಡಬೇಕು ; ಇವುಗಳೇ ಆಶ್ರಮಧರ್ಮಗಳೆನಿಸಿವೆ.

ಈ ಆಶ್ರಮಧರ್ಮವು ಸನಾತನಧರ್ಮದಲ್ಲಿ ವಿಧಿಸಿರುವಷ್ಟು ನ್ಯಾಯವಾದ ಧರ್ಮ ಬೇರೆಲ್ಲಿಯೂ ಇಲ್ಲ : ಈ ರೀತಿಯಾದ ಆಶ್ರಮ ಧರ್ಮವು ಹಿಂದೂಧರ್ಮದಲ್ಲಿ ಇರುವುದರಿಂದ, ಕಠಿಣವಾಗಿ ವರ್ಣಾಶ್ರಮಧರ್ಮವನ್ನು ಪಾಲಿಸುವ ಹಿಂದುವು ಎಂದಿಗೂ, ಅಪವಿತ್ರತೆ, ಸೋಮಾರಿತನ, ಅತಿಸ್ವು, ಮುಂತಾದವುಗಳನ್ನು ಹೊಂದಲಾರನು.

— ಮುಂದುವರಿಯುವುದು —

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಶ್ರೀ ಪ್ರೊಫೆಸರ್ ರವೀಂದ್ರಕುಮಾರ್ ಸಿದ್ಧಾಂತಶಾಸ್ತ್ರಿ M. A., P. R. S. ರವರ 'ಪ್ರಾಚೀನ ಭಾರತೀಯ ಸಂಸ್ಕೃತಿ' ಎಂಬ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ.

ಆ. ಸ. ಅಯ್ಯಂಗಾರ್, ಹೊಂಗೂರು.

Advertise in

The Oldest Newspaper in the State

Sri 'SATYAVADI' Daily

Chamarajapuram, Mysore 4

ಸಿಟಿ ಮುನಿಸಿಪಾಲಿಟಿ, ಮೈಸೂರು

No. T. H. C. R. 89 / 64-65 ತಾ|| 10-9-1964

ಹರಾಜು ಇನಿಸಿಹಾರು

ಈ ಮೂಲಕ ಸೆಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಸರ್ವ ಸಾಮಿದ ಒಂಭೈನೂರ ಅಂವತ್ಸರನಾಲ್ಕನೆ ಇಸವಿ ಸೆಪ್ಟೆಂಬರ್ ಮಾಹೆ ತಾರೀಖು ಇಪ್ಪತ್ತೆಂಡನೆ ಮಂಗಳವಾರ ದಿವಸ ಪಾತಃಕಾಲ ಹನ್ನೊಂದು ಘಂಟೆಗೆ ಸರಿಯಾಗಿ ಟರ್ಫ್ ಹಾಲ್ ಆಫೀಸಿನ ಬಳಿ ಟರ್ಫ್ ಹಾಲ್‌ಗೆ ಅನುಪಯುಕ್ತವಾಗಿ ಕಂಡ ಬಂದಿರುವ ಸಾಮಾನುಗಳನ್ನು ಬಹಿರಂಗವಾಗಿ ಮುನಿಸಿಪಲ್ ಇಂಜಿನೀಯರ್‌ರವರಿಂದ ಹರಾಜು ಮಾಡಲಾಗುತ್ತೆ ಸಾಮಾನುಗಳ ವಿವರ ವಗೈರೆ ಬಗ್ಗೆ ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಟರ್ಫ್ ಹಾಲ್ ಆಫೀಸಿನಲ್ಲಿ ಪಡೆಯಬಹುದು.

(ಸಹಿ) ಅಬ್ದುಲ್ ಗಫಾರ್ ಖಾನ್
ಛೇರ್ಮನ್ I / c, ಟರ್ಫ್ ಹಾಲ್ ಕಮಿಟಿ, ಮೈಸೂರು

ವುಡ್‌ಲ್ಯಾಂಡ್ 11-9-64 ರಿಂದ

ಶಿ ಸು ಅಮೋಘ ಆರಂಭ

.... ಎ. ವಿ ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ— ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 2 ನೇ ವಾರ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಸತಿಶಕ್ತಿ

ಪಾತ್ರಧಾರಿಗಳು— ರಾಜಕುಮಾರ್, ಸಾಹುಕಾರ್ ಜಾನಕಿ, ರಾಜಮ್ಮ

SHAKTI

SUDHA

Superb Tonic

Edited, Printed & Published by the Proprietor Dharma Prachara Nirata [M. S. Krishna Rao] at the Satyavadi Press, Chamarajapuram, Mysore 4.